# ಶ್ರೀಮಾತೆಯವರನ್ನು ಕುರಿತು ಶ್ರೀರಾಮಕೃಷ್ಣರು

[ಒಂದು ದಿನ ಗೋಲಾಪ್‌ಮಾಗೆ ಶ್ರೀರಾಮಕೃಷ್ಣರು ಹೇಳಿದರು] 'ಅವಳು ಶಾರದೆ ಸಾಕ್ಷಾತ್ ಸರಸ್ವತಿ—ಜ್ಞಾನವೀಯಲು ಬಂದಿರುವಳು. ರೂಪವಿದ್ದರೆ ಜನರು ಕೆಟ್ಟ ದೃಷ್ಟಿಯಿಂದ ನೋಡಿ ಅವರಿಗೆ ಹಾನಿಯಾದೀತೆಂದು ಈ ಬಾರಿ ಆಕೆ ತನ್ನ ರೂಪವನ್ನು ಮರೆ ಮಾಚಿದ್ದಾಳೆ.' [ಇನ್ನೊಮ್ಮೆ ಹೇಳಿದರು] 'ಆಕೆ ಜ್ಞಾನದಾಯಿನೀ, ಮಹಾ ಬುದ್ಧಿಮತೀ. ಅವಳೇನು ಸಾಮಾನ್ಯ ವ್ಯಕ್ತಿಯೆ? ಅವಳು ನನ್ನ ಶಕ್ತಿ' [ಹೃದಯನಿಗೆ ಒಮ್ಮೆ ಹೇಳಿದರು] 'ನೋಡು ಅವಳ ಹೆಸರು ಶಾರದಾ, ಅವಳು ಸರಸ್ವತಿ. ಅದಕ್ಕೇ ಒಡವೆ ಧರಿಸುವುದೆಂದರೆ ಇಷ್ಟ.'

[ 'ಶ್ರೀರಾಮಕೃಷ್ಣರಿಗೂ ಶ್ರೀಮಾತೆಯವರಿಗೂ ಎಷ್ಟು ವ್ಯತ್ಯಾಸ! ಶ್ರೀರಾಮಕೃಷ್ಣರು ಯಾವಾಗಲೂ ಭಗವಚ್ಚಿಂತನೆಯಲ್ಲಿರುತ್ತಿದ್ದರು, ಆದರೆ ಶ್ರೀಮಾತೆಯವರಾದರೂ ಸಂಸಾರದ ಕೆಸರಿನಲ್ಲಿ ಸಿಲುಕಿಕೊಂಡಿದ್ದಾರೆ' ಎಂದು ಭಾವಿಸಿದ ಯೋಗೀನ್ ಮಾಗೆ ಶ್ರೀರಾಮಕೃಷ್ಣರು ಹೇಳಿದರು]: ಗಂಗೆಯಲ್ಲಿ ಯಾರು ಎಷ್ಟೇ ಕಲ್ಮಶಗಳನ್ನು ತೇಲಿಸಲಿ, ಗಂಗೆಯನ್ನು ಅದು ಎಂದಾದರೂ ಅಪವಿತ್ರಗೊಳಿಸಲು ಸಾಧ್ಯವೇ? ಗಂಗೆಗೆ ಏನಾದರೂ ತಗಲುತ್ತದೆಯೇ? ಆಕೆಯನ್ನು (ಶಾರದಾದೇವಿಯವರನ್ನು) ಆ ರೀತಿ ಎಂದು ತಿಳಿ. ಆಕೆ ಮತ್ತು ಇದು (ತಮ್ಮನ್ನು ತೋರುತ್ತ) ಅಭೇದವೆಂದು ತಿಳಿ.

[ಕುಡುಕನಾಗಿದ್ದ ಕಾಲೀಪದಘೋಷನ ಪತ್ನಿ ವಿಷಣ್ಣ ವದನಳಾಗಿ ತೀವ್ರ ಮನೋವೇದನೆಯೊಂದಿಗೆ ಬಂದು ಶ್ರೀರಾಮಕೃಷ್ಣರ ಮುಂದೆ ತನ್ನ ಮನದಳಲನ್ನು ತೋಡಿಕೊಂಡಾಗ ಶ್ರೀಮಾತೆಯವರನ್ನು ತೋರಿಸುತ್ತ] 'ನೋಡು, ಅಲ್ಲಿ ಒಬ್ಬಳು ಹೆಂಗಸಿದ್ದಾಳೆ. ಅವಳ ಮುಂದೆ ನಿನ್ನ ದುಃಖವನ್ನೆಲ್ಲ ಹೇಳಿಕೊಂಡರೆ ಅವಳಿಗೆ ಎಲ್ಲ ಮಂತ್ರೌಷಧಿಗಳೂ ಗೊತ್ತು. ಈ ವಿಷಯದಲ್ಲಿ ಅವಳ ಶಕ್ತಿ ನನಗಿಂತ ಹಿರಿದು' ಎಂದು ನಹಬತಿಗೆ ಕಳಿಸಿದರು.

[ಶ್ರೀಮಾತೆಯವರು ಸ್ವಭಾವತಃ ಧಾರಾಳವಾಗಿ ಮುಕ್ತ ಹಸ್ತದಿಂದ ತಮಗಾಗಿ ಭಕ್ತರು ತರುವುದನ್ನೆಲ್ಲಾ ನೀಡಿಬಿಡುತ್ತಿದ್ದರು. ಶ್ರೀರಾಮಕೃಷ್ಣರು ಒಮ್ಮೆ ಆಕ್ಷೇಪಿಸಿದಾಗ ಮರುಮಾತಾಡದೆ ಕೂಡಲೆ ನಹಬತಿಗೆ ಹೊರಟುಹೋದರು. ಶ್ರೀರಾಮಕೃಷ್ಣರು ಮನನೊಂದು ರಾಮಲಾಲನಿಗೆ] 'ಓ ರಾಮಲಾಲ್, ಹೋಗು, ನಿನ್ನ ಚಿಕ್ಕಮ್ಮನನ್ನು ಸ್ವಲ್ಪ ಸಮಾಧಾನಪಡಿಸು. ಅವಳಿಗೆ ಕೋಪ ಬಂದರೆ (ತಮ್ಮ ದೇಹದ ಕಡೆ ತೋರಿಸಿ) ಇದರ ಎಲ್ಲವೂ ನಷ್ಟವಾದಂತೆ.' ಎಂದರು.

[ಶ್ರೀಮಾತೆಯವರಿಗೆ ಒಮ್ಮೆ ಅಗೌರವವನ್ನು ತೋರಿಸಿದ ಹೃದಯನಿಗೆ ಎಚ್ಚರಿಕೆಯನ್ನಿತ್ತು ಶ್ರೀರಾಮಕೃಷ್ಣರು ಹೇಳಿದ್ದರು] 'ಓ ಹೃದೆ, (ತಮ್ಮ ದೇಹದ ಕಡೆ ತೋರಿಸಿ) ನೀನು ಇದಕ್ಕೆ ತುಚ್ಛ ಮಾತುಗಳನ್ನು ಆಡಬಹುದು, ಆದರೆ ಅವಳ ವಿಚಾರದಲ್ಲಿ ಹಾಗೆ ಮಾಡಬೇಡ. ಇದರೊಳಗೇನಿದೆಯೊ ಅದು ಹೆಡೆಯೆತ್ತಿದರೆ ನಿನಗೆ ರಕ್ಷಣೆ ಸಿಕ್ಕಿದರೂ ಸಿಗಬಹುದು. ಆದರೆ ಅವಳ ಒಳಗೆ ಏನಿದೆಯೊ ಅದು ಹೆಡೆಯೆತ್ತಿತೆಂದರೆ ಬ್ರಹ್ಮ ವಿಷ್ಣು ಮಹೇಶ್ವರರೂ ನಿನ್ನನ್ನು ರಕ್ಷಿಸಲಾರರು.'

[ವೈರಾಗ್ಯಚಕ್ರವರ್ತಿಯಾಗಿದ್ದ ಶ್ರೀರಾಮಕೃಷ್ಣರ ಎದೆಯಲ್ಲಿ ಎಂತಹ ಸತಿಪ್ರೇಮವಿತ್ತು! ಶ್ರೀರಾಮಕೃಷ್ಣರು ಹಿಂದೆ ತಪಶ್ಚರ್ಯೆಯಲ್ಲಿ ನಿರತರಾಗಿದ್ದಾಗ ಒಮ್ಮೆ ಅವರಿಗೆ ಸೀತೆಯ ದರ್ಶನವಾಗಿತ್ತು, ಆಗ ಸೀತೆಯ ಕೈಯಲ್ಲಿ ವಜ್ರದ ಹರಳಿರುವ ಬಳೆಗಳಿದ್ದುದನ್ನು ಪರಿಶೀಲಿಸಿದ್ದರು. ಅದೇ ರೀತಿಯ ಬಳೆಯನ್ನು ಮಾಡಿಸಿ ಶ್ರೀಮಾತೆಯವರಿಗೆ ನೀಡಿದ್ದರು. ಒಡವೆ ಕೊಟ್ಟು] 'ಇದೇ ನನ್ನ ಅವಳ ಸಂಬಂಧ' ಎಂದು ನಕ್ಕು ನುಡಿದಿದ್ದರು. ❖

# ಶ್ರೀರಾಮಕೃಷ್ಣರನ್ನು ಕುರಿತು ಶ್ರೀಮಾತೆಯವರು

**ನ**ಮ್ಮ ಮಾವನವರು ದೈವಭಕ್ತರು, ಯಾರಿಂದಲೂ ಅವರು ದಾನವನ್ನು ಸ್ವೀಕರಿಸಲಿಲ್ಲ. ತಾವು ಇಲ್ಲದೇ ಇರುವಾಗ ಯಾರಾದರೂ ದಾನ ಕೊಟ್ಟರೆ ಅದನ್ನು ಸ್ವೀಕರಿಸಬಾರದೆಂದು ಅವರು ಮನೆಯಲ್ಲಿ ಹೇಳುತ್ತಿದ್ದರು. ಆದರೆ ನಮ್ಮ ಅತ್ತೆಯವರು ಯಾರಾದರೂ ಏನನ್ನಾದರೂ ಕೊಟ್ಟರೆ ಅದನ್ನು ಅಡುಗೆ ಮಾಡಿ ದೇವರಿಗೆ ನೈವೇದ್ಯಮಾಡಿ ಪ್ರಸಾದವನ್ನು ಎಲ್ಲರಿಗೂ ಹಂಚುತ್ತಿದ್ದರು. ಮಾವನವರಿಗೆ ಇದು ಗೊತ್ತಾದರೆ ಕೋಪಿಸಿಕೊಳ್ಳುತ್ತಿದ್ದರು. ಅವರಿಗೆ ತೀವ್ರ ಭಕ್ತಿ ಇತ್ತು. ಆದ್ದರಿಂದಲೇ ನನ್ನ ಪತಿದೇವರು ಅವರ ಕುಲದಲ್ಲಿ ಹುಟ್ಟಿದರು.

ಶ್ರೀರಾಮಕೃಷ್ಣರು ತಮ್ಮ ದೇಹ ಗಯೆಯಿಂದ ಬಂದಿತೆಂದು ಹೇಳುತ್ತಿದ್ದರು. ಅವರ ತಾಯಿ ಕಾಲವಾದ ಮೇಲೆ ಗಯೆಯಲ್ಲಿ ಪಿಂಡಕೊಡುವಂತೆ ನನಗೆ ಹೇಳಿದರು. ಮಗ ಬದುಕಿರುವಾಗ ಸೊಸೆಗೆ ಪಿಂಡ ಕೊಡುವ ಅಧಿಕಾರವಿಲ್ಲವೆಂದೆ. "ಇಲ್ಲ, ಇಲ್ಲ, ನಿನಗೆ ಅಧಿಕಾರವಿದೆ. ನನಗೆ ಯಾವ ರೀತಿಯಲ್ಲೂ ಗಯೆಗೆ ಹೋಗುವುದಕ್ಕೆ ಆಗುವುದಿಲ್ಲ. ನಾನು ಹೋದರೆ ಹಿಂತಿರುಗಿ ಬರಲು ಸಾಧ್ಯವೆಂದು ತಿಳಿಯುವೆಯಾ?" ಎಂದರು. ಅವರು ಅಲ್ಲಿಗೆ ಹೋಗಲಿಲ್ಲ. ನಾನೇ ಅನಂತರ ಗಯೆಯಲ್ಲಿ ಅದನ್ನು ಸಲ್ಲಿಸಿದೆ.

ನಾನು ನಹಬತಿನಲ್ಲಿರುತ್ತಿದ್ದೆ ನಿಜ, ಆದರೆ ನನ್ನ ಪ್ರಾಣ-ಮನಸ್ಸು ಠಾಕೂರರ ಕೋಣೆಯಲ್ಲೆ ಇರುತ್ತಿತ್ತು. ಅಲ್ಲಿ ಏನು

ನಡೆಯುತ್ತಿದೆ ಎಂಬುದನ್ನು ಕೇಳಲು ಉತ್ಕೀರ್ಣಳಾಗಿರುತ್ತಿದ್ದೆ. ಲಕ್ಷ್ಮೀ, ಗೌರದಾಸಿ, ಗೋಪಾಲನ ತಾಯಿ ಇವರುಗಳ ಮೂಲಕ ಸುದ್ದಿ ತಿಳಿಯುತ್ತಿದ್ದೆ. ನಹಬತಿನ ವರಾಂಡದಲ್ಲಿದ್ದ ಬಿದುರಿನ ತಡಿಕೆಯಲ್ಲಿ ಒಂದು ಕಂಡಿ ಮಾಡಿದ್ದೆ. ಅದರ ಮೂಲಕ ಠಾಕುರರನ್ನೂ ಅವರ ಕಾರ್ಯಕಲಾಪಗಳನ್ನೂ ಸಾಧ್ಯವಾದಷ್ಟೂ ನೋಡುತ್ತಿದ್ದೆ. ಆ ಕಂಡಿ ಕ್ರಮೇಣ ದೊಡ್ಡದಾಗುತ್ತಿರುವುದನ್ನು ಗಮನಿಸಿದ ಠಾಕುರರು ಒಂದು ದಿನ ನಗುತ್ತಾ 'ಓ ರಾಮಲಾಲ್, ನಿನ್ನ ಚಿಕ್ಕಮ್ಮನ ಮನೆಯ ಬಿದುರಿನ ತಡಿಕೆಯ ಕಂಡಿ ದಿನ ದಿನಕ್ಕೂ ದೊಡ್ಡದಾಗುತ್ತಿದೆ. ಆ ತೆರೆ ಕೊನೆಯವರೆಗೂ ಉಳಿಯುತ್ತೋ ಇಲ್ಲವೋ!' ಎಂದು ನನಗೆ ಕೇಳಿಸುವಂತೆ ಹೇಳಿದರು. ನನಗೆ ಕೇಳಿ ಲಜ್ಜೆಯಿಂದ ಪ್ರಾಣ ಹೋದಂತಾಯಿತು. ಆದರೆ ನೋಡದೆಯೂ ಇರಲಾಗುತ್ತಿರಲಿಲ್ಲ. ಅಂಥ ಆಕರ್ಷಣೆ ಅಲ್ಲಿಯದು!

ದಿನವೆಲ್ಲಾ ಕೀರ್ತನೆ, ಆನಂದ, ನಗು, ಬೋಧನೆ ಮತ್ತು ಕಥೆ ಹೇಳುವುದರಲ್ಲಿ ಕಳೆಯುತ್ತಿತ್ತು. ನಾನು ಕಂಡಂತೆ ಅವರು ಯಾವಾಗಲೂ ಜೋಲು ಮುಖಹಾಕಿಕೊಂಡವರಲ್ಲ ಅಥವಾ ವ್ಯಥೆ ಪಟ್ಟವರಲ್ಲ. ಅನೇಕ ವೇಳೆ ಅವರು ನನಗೆ ಒಳ್ಳೆಯ ಬುದ್ಧಿವಾದವನ್ನು ಕೊಡುತ್ತಿದ್ದರು. ನನಗೆ ಬರೆಯುವುದಕ್ಕೆ ಬಂದಿದ್ದರೆ ಅವನ್ನೆಲ್ಲಾ ಬರೆದಿಡುತ್ತಿದ್ದೆ. ನಾನೆಂದೂ ಅವರು ಚಿಂತಾಕ್ರಾಂತರಾಗಿದ್ದುದನ್ನು ನೋಡಲಿಲ್ಲ. ಎಲ್ಲರೊಡನೆಯೂ, ಐದುವರ್ಷದ ಬಾಲಕನೊಡನೆಯಾಗಲಿ ವಯಸ್ಸಾದ ಮುದುಕನೊಡನೆಯಾಗಲಿ ಹರ್ಷದಿಂದಿರುತ್ತಿದ್ದರು. ಅವರೆಂದಿಗೂ ಖಿನ್ನರಾಗಿದ್ದುದನ್ನು ನೋಡಲಿಲ್ಲ.

...ಶ್ರೀಗುರುದೇವರು ಎಷ್ಟು ಸುಂದರವಾಗಿ ಹಾಡುತ್ತಿದ್ದರು! ಅವರ ಧ್ವನಿ ಎಷ್ಟು ಇಂಪಾಗಿತ್ತು ! ಹಾಡುವಾಗ ಅದರಲ್ಲೇ ತನ್ಮಯರಾಗುತ್ತಿದ್ದರು. ಅವರ ಧ್ವನಿ ಇನ್ನೂ ನನ್ನ ಕಿವಿಯಲ್ಲಿ ಅನುರಣಿತವಾಗುತ್ತಿದೆ. ಅದನ್ನು ನೆನೆಸಿಕೊಂಡಾಗ ಇತರರ ಧ್ವನಿ ಸಪ್ಪೆಯಾಗುವುದು. ನರೇಂದ್ರನಿಗೂ ಧ್ವನಿ ಚೆನ್ನಾಗಿತ್ತು.

ಠಾಕುರರು ಎಂತಹ ಅಪೂರ್ವ ದಿವ್ಯಭಾವದಲ್ಲಿರುತ್ತಿದ್ದರೆಂಬುದನ್ನು ಹೇಳಿ ತಿಳಿಸಿಕೊಡಲಾಗುವುದಿಲ್ಲ. ಕೆಲವೊಮ್ಮೆ ಭಾವದಲ್ಲಿ ಏನೇನೂ ಮಾತನಾಡುತ್ತಿದ್ದರು, ಕೆಲವೊಮ್ಮೆ ನಗುತ್ತಿದ್ದರು, ಕೆಲವೊಮ್ಮೆ ಅಳುತ್ತಿದ್ದರು, ಕೆಲವೊಮ್ಮೆ ಒಮ್ಮೆಯೆ ಸಮಾಧಿಯಲ್ಲಿ ಸ್ಥಿರವಾಗಿಬಿಡುತ್ತಿದ್ದರು—ಇಡೀ ರಾತ್ರಿ ಹೀಗೆಯೇ ಕಳೆಯುತ್ತಿತ್ತು. ಅದೆಂತಹ ಭಾವಾವೇಶ! ಅಬ್ಬ! ನಾನು ನೋಡಿ ಭಯದಿಂದ ಕಂಪಿಸುತ್ತಿದ್ದೆ. ಎಂದು ಬೆಳಗಾಗುವುದೊ ಎಂದು ಕಾಯುತ್ತಿದ್ದೆ. ಆಗ ನನಗೆ ಭಾವಸಮಾಧಿಯ ವಿಷಯವೇ ಗೊತ್ತಿರಲಿಲ್ಲ. ಒಂದು ದಿನ ಅವರ ಸಮಾಧಿ ದೀರ್ಘ ಸಮಯದ ನಂತರವೂ ಕೊನೆಯಾಗದ್ದು ಕಂಡು ಭಯದಿಂದ ಹೃದಯನಿಗೆ ಹೇಳಿ ಕಳಿಸಿದೆ. ಅವನು ಬಂದು ಬಹಳ ಹೊತ್ತು ಕಿವಿಯಲ್ಲಿ ನಾಮೋಚ್ಚಾರಣೆ ಮಾಡಿದ ಮೇಲೆ ಅವರಿಗೆ ಚೈತನ್ಯ ಬಂತು. ಮರುದಿನ ಅವರೇ ನನ್ನ ಕಷ್ಟವನ್ನು ನೋಡಿ ಯಾವ ಯಾವ ಭಾವದಲ್ಲಿ ಯಾವ ಯಾವ ನಾಮವನ್ನು ಉಚ್ಚರಿಸಬೇಕೆಂಬುದನ್ನು ನನಗೆ ಕಲಿಸಿಕೊಟ್ಟರು. ಆಮೇಲೆ ಅಷ್ಟೊಂದು ಭಯವಿರಲಿಲ್ಲ. ಆದರೆ ಅವರಿಗೆ ಯಾವಾಗ ಯಾವ ಭಾವಸಮಾಧಿಯಾಗುವುದೊ ಎಂದು ಇಡೀ ರಾತ್ರಿ ನಾನು ಎಚ್ಚರದಿಂದಿರಬೇಕಾಗುತ್ತಿತ್ತು. ಇದು ಒಂದುದಿನ ಅವರಿಗೆ ತಿಳಿದು ನನ್ನನ್ನು ನಹಬತಿಗೆ ಹೋಗಿ ಮಲಗಿಕೊಳ್ಳಲು ಹೇಳಿದರು.

...ನನ್ನ ಪತಿದೇವರೇ ಒಮ್ಮೆ ತಮ್ಮ ಕೈಯಿಂದ ಕುಂಡಲಿನಿ ಚಿತ್ರವನ್ನು ಬರೆದು, ಚಕ್ರಗಳನ್ನು ನನಗೆ ವಿವರಿಸಿದರು. [ಸಮೀಪದಲ್ಲಿದ್ದ ಸೇವಕ ನಿಮ್ಮ ಹತ್ತಿರ ಆ ಚಿತ್ರಗಳು ಇನ್ನೂ ಇವೆಯೆ? ಎಂದು ಕೇಳಿದಾಗ] ಇಲ್ಲ, ಮಗು. ಆಗ ಮುಂದೆ ಭಕ್ತರು ಬರುವರು ಎಂದು ನನಗೆ ಗೊತ್ತಿರಲಿಲ್ಲ. ಎಲ್ಲೋ ಕಳೆದು ಹೋಯಿತು.

ತ್ಯಾಗವೇ ಶ್ರೀರಾಮಕೃಷ್ಣರ ತೇಜಸ್ಸು. ಅವರು ಹಣವನ್ನು ಮುಟ್ಟುತ್ತಲೂ ಇರಲಿಲ್ಲ. ಹಣ ಕಂಡರೆ ಕೈಸೆಳೆದುಕೊಳ್ಳುತ್ತಿತ್ತು. ಅವರು 'ಈ ಪ್ರಪಂಚ ನಶ್ವರ, ಇಲ್ಲದೇ ಇದ್ದರೆ ಕಾಮಾರಪುಕುರವನ್ನು ಚಿನ್ನದ ತಗಡಿನಿಂದ ಮುಚ್ಚುತ್ತಿದ್ದೆ. ಆದರೆ ಪ್ರಪಂಚ ನಶ್ವರವೆಂದು ನನಗೆ ಗೊತ್ತಿದೆ. ದೇವರೊಬ್ಬನೇ ಸತ್ಯ' ಎನ್ನುತ್ತಿದ್ದರು. ಓ ! ಒಂದು ದಿನ ಅವರು ನಹಬತ್‌ನಲ್ಲಿ ನನ್ನ ಕೊಠಡಿಯೊಳಕ್ಕೆ ಬಂದರು. ಅವರ ಚಿಕ್ಕ ಕೈಚೀಲದಲ್ಲಿ ಮಸಾಲೆ ಇರಲಿಲ್ಲ. ಅವರು ಅದನ್ನು ಆಗಾಗ್ಗೆ ತಿನ್ನುತ್ತಿದ್ದರು. ನಾನು ಅವರಿಗೆ ಅಲ್ಲೇ ತಿನ್ನಲು ಸ್ವಲ್ಪ ಕೊಟ್ಟು, ಇನ್ನೂ ಸ್ವಲ್ಪ ಒಂದು ಚಿಕ್ಕ ಪೊಟ್ಟಣದಲ್ಲಿ ಕಟ್ಟಿ ತಮ್ಮ ಕೊಠಡಿಗೆ ತೆಗೆದುಕೊಂಡು ಹೋಗುವಂತೆ ಹೇಳಿದೆ. ಅವರು ಕೊಠಡಿಗೆ ಹೋಗಲು ಹೊರಟರು. ಅಲ್ಲಿಗೆ ಹೋಗುವ ಬದಲು ಗಂಗಾತೀರಕ್ಕೆ ನೇರವಾಗಿ ಹೋದರು. ಅವರು ದಾರಿಯನ್ನು ನೋಡಲಿಲ್ಲ. ದಾರಿಯ ನೆನಪೂ ಅವರಿಗಿರಲಿಲ್ಲ. ಅವರು 'ತಾಯಿ, ನಾನು ಮುಳುಗಿಹೋಗಲೆ?' ಎಂದು ಪುನಃ ಪುನಃ ಕೇಳಿದರು. ನನಗೆ ದಾರುಣ ವ್ಯಥೆಯಾಗಿ ಕಳವಳವಾಯಿತು. ನದಿ ತುಂಬಿ ಹರಿಯುತ್ತಿತ್ತು. ನಾನಾಗ ಇನ್ನೂ ಚಿಕ್ಕವಳು, ನನ್ನ ಕೋಣೆಯಿಂದ ಹೊರಗೆ ಹೋಗುತ್ತಿರಲಿಲ್ಲ. ನಾನಾರನ್ನು ಅವರ ಬಳಿ ಕಳುಹಲಿ! ಕಡೆಗೊಮ್ಮೆ ಕಾಳಿ ದೇವಾಲಯಕ್ಕೆ ಸೇರಿದ ಬ್ರಾಹ್ಮಣನೊಬ್ಬ ನನ್ನ ಕೊಠಡಿಯಿದ್ದ ಕಡೆ ಬರುತ್ತಿರುವುದನ್ನು ನೋಡಿದೆ. ಅವನ ಮೂಲಕ ಊಟಮಾಡುತ್ತಿದ್ದ ಹೃದಯನನ್ನು ಕರೆಸಿ ಹೇಳಿದೆ. ಅವನು ಊಟವನ್ನು ಬಿಟ್ಟೆದ್ದು ಓಡಿಹೋಗಿ ಅವರನ್ನು ಕೊಠಡಿಗೆ ಕರೆತಂದ. ಒಂದು ಕ್ಷಣ ತಡವಾಗಿದ್ದರೆ ಅವರು ಗಂಗೆಯಲ್ಲಿ ಮುಳುಗುತ್ತಿದ್ದರು! ನಾನವರ ಕೈಯಲ್ಲಿ ಮುಂದಕ್ಕೆ ಇರಲೆಂದು ಸ್ವಲ್ಪ ಮಸಾಲೆಯನ್ನು ಕೊಟ್ಟಿದ್ದರಿಂದ ಅವರಿಗೆ ಹಾದಿಯೇ ಕಾಣಿಸಲಿಲ್ಲ. ಸಾಧುವಾದವನು ಯಾವ ಪದಾರ್ಥವನ್ನೂ ಶೇಖರಿಸಿ ಇಟ್ಟುಕೊಳ್ಳಬಾರದು. ಅವರ ತ್ಯಾಗ ಪೂರ್ತಿಯಾಗಿ ಶೇಕಡ ನೂರರಷ್ಟಿತ್ತು.

ಅವರ ಉಪದೇಶ ಎಷ್ಟು ಸುಂದರವಾಗಿದೆ! ಎಂತಹ ಪವಿತ್ರ ಜೀವ ಹುಟ್ಟಿತು! ಎಲ್ಲ ಜನರಿಗೂ ಅವರ ವಾಣಿಯಿಂದ ಶಾಂತಿ ದೊರಕಿತು. ಆನಂದವೇ ಮೂರ್ತಿವೆತ್ತಂತೆ ಇದ್ದರು ಅವರು.

❖